ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಹಾಗೂ ಎಫ್.ಟಿ.ಎಸ್.ಸಿ-**1,** ಹಾವೇರಿ
ಎಸ್.ಸಿ. **13/2024**

PW-05

CW-09

ಸಾಕ್ಷಿದಾರರ ಹೆಸರುಃ ಸುನಂದಾ ಚಿಕ್ಕಪ್ಪ ಹಳೆಕೋಟೆ

ವಯಸ್ಸುಃ 38 ವರ್ಷ

ಉದ್ಯೋಗಃ ಮನೆಕೆಲಸ

ಹಾಲಿ ವಾಸ ಸ್ಥಳಃ ಗೆಜ್ಜಿಹಳ್ಳಿ ತಾಃ ಹಾನಗಲ್ಲ

ದಿನಾಂಕ**: 21.03.2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು**.**

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ

ಚಾಸಾ-1 ಗೊತ್ತು. ಇವರು ನನ್ನ ಚಿಕ್ಕಪ್ಪ. ಚಾಸಾ-10 ನನ್ನ ಚಿಕ್ಕಮ್ಮ. ಚಾಸಾ-6 ರಿಂದ 8 , 11 ರಿಂದ 23 ರವರು ಗೊತ್ತು. ಆರೋಪಿತರು ಗೊತ್ತು. 1 , 2 ನೇ ಆರೋಪಿತರು ನಮ್ಮೂರಿನವರು. 3 ನೇ ಆರೋಪಿಯ ಕಾಲವೆ ಕಲ್ಲಾಪೂರ ಗ್ರಾಮದವನು.

2022 ರಲ್ಲಿ ನಮ್ಮೂರಲ್ಲಿ ದ್ಯಾಮವ್ವ ಉರ್ಫ ಕೆಂಗಣ್ಣ ದುರ್ಗಾದೇವಿ ಜಾತ್ರೆ ಇತ್ತು. ತಾಃ22.03.2022 ರಂದು ಚಾಸಾ-1 ರವರು ಜಾತ್ರೆಯ ನಿಮಿತ್ತ ದ್ಯಾಮವ್ವ ದೇವಿಯ ಮೂರ್ತಿಯ ಮೆರವಣಿಗೆ ಮಾಡಲು ಟ್ರ್ಯಾಕ್ಟರನ್ನು ಸಿದ್ದಪಡಿಸಿ ರಾತ್ರಿ ಮನೆಗೆ ವಾಪಸ್ಸಾಗುತ್ತಿದ್ದರು. ಆ ದಿನ ನಾನು ಗ್ರಾಮ ದೇವಿಯ ಮೆರವಣಿಗೆ ನೋಡಲು ಹೋಗಿದ್ದೆ. ಆ ಸಮಯದಲ್ಲಿ ರಾತ್ರಿ 10.00 ಗಂಟೆ ಆಗಿತ್ತು. 1 ರಿಂದ 3 ನೇ ಆರೋಪಿತರು ಸೇರಿ ಚಾಸಾ-1 ರವರ ಮನೆಯ ಮುಂದೆ ಸಾರ್ವಜನಿಕ ನೀರು ಬಿಡುವ ವಿಚಾರವಾಗಿ ಜಗಳ ಮಾಡುತ್ತಿದ್ದರು. ಆಗ ಚಾಸಾ-1 ರವರ ಎದೆಯ ಮೇಲಿನ ಅಂಗಿ ಹಿಡಿದು ಎಳೆದಾಡಿದರು. ಆಗ ನಾನು ಮತ್ತು ಚಾಸಾ-10 ರವರು ಬಿಡಿಸಿಕೊಳ್ಳಲು ಹೋದಾಗ ಆರೋಪಿತರು ನಮ್ಮನ್ನು ಎಳೆದಾಡಿ , ಜಗ್ಗಿ ದೂಡಿ ಅವರ ಹೆಣ್ಣು ತನದ ಮಾನಭಂಗ ಮಾಡಿದರು. ಜಗಳ ಬಿಡಿಸಿಕೊಳ್ಳಲು ಹೋದ ಚಾಸಾ-6 ರಿಂದ 8 ರವರು ಬಿಡಿಸಿಕೊಳ್ಳಲು ಹೋದರು. ಅಷ್ಟರಲ್ಲಾಗಲೇ ಬೈಕನಲ್ಲಿ ಬ್ಯಾಗನಲ್ಲಿದ್ದ ಚಾಕುವನ್ನು ತೆಗೆದುಕೊಂಡು ಬಂದು, 1 ರಿಂದ 3 ನೇ ಆರೋಪಿತರು ಚಾಕುವಿನಿಂದ ಚಾಸಾ-6 ರಿಂದ 8 ರವರಿಗೆ ಚುಚ್ಚಿ ಗಾಯ ಪಡಿಸಿದರು. ಆದರೆ ನನಗೆ ಯಾರು ಯಾರಿಗೆ ಚಾಕುವಿನಿಂದ ಚುಚ್ಚಿ ಗಾಯ ಪಡಿಸಿದರು ಎಂದು ನನಗೆ ಸ್ಪಷ್ಟವಾಗಿ ಹೇಳಲು ಆಗುವುದಿಲ್ಲ. ನಂತರ ಆ ಕಾಲಕ್ಕೆ ಊರಿನ ಹಿರಿಯರು ಜಾತ್ರೆ ಕಮೀಟಿಯ ಸದಸ್ಯರು ಮತ್ತು ಚಾಸಾ-25 ರವರು ಹಾಗೂ ಇನ್ನಿತರರು ಬಂದು ಚಾಸಾ-6 ರಿಂದ 8 ಸಂತೈಸಿ ಆರೋಪಿತರಿಂದ

ಬಿಡಿಸಿಕೊಂಡಿರುತ್ತಾರೆ. ಆರೋಪಿತರು ಸ್ಥಳದಿಂದ ಓಡಿಹೋಗಿರುತ್ತಾರೆ. ಗಾಯಗೊಂಡ ಚಾಸಾ-6 ರಿಂದ 8 ರವರನ್ನು ಖಾಸಗಿ ವಾಹನದಲ್ಲಿ ಹಾನಗಲ್ಲ ಸರ್ಕಾರಿ ಆಸ್ಪತ್ರೆಗೆ ಉಪಚಾರಕ್ಕಾಗಿ ಕಳುಹಿಸಿಕೊಟ್ಟರು. ಈ ಬಗ್ಗೆ ಚಾಸಾ-1 ರವರು ದೂರನ್ನು ಸಲ್ಲಿಸಿರುತ್ತಾರೆ. ಘಟನೆಯು ರಾತ್ರಿ 10.00 ಗಂಟೆಗೆ ನಡೆದಿರುತ್ತದೆ. ಜಾತ್ರಾ ನಿಮಿತ್ತ ಲೈಟಿನ ವ್ಯವಸ್ಥೆ ಇದ್ದುದರಿಂದ ಲೈಟಿನ ಬೆಳಕಿನಲ್ಲಿ ನೋಡಿರುತ್ತೇನೆ. ಈ ಬಗ್ಗೆ ಪೋಲಿಸರು ನನ್ನನ್ನು ವಿಚಾರಿಸಿ ನನ್ನ ಹೇಳಿಕೆ ಮಾಡಿಕೊಂಡಿರುತ್ತಾರೆ. ನಂತರ ಹಾನಗಲ್ಲ ನ್ಯಾಯಾಲಯಕ್ಕೆ ಹೋಗಿ ಸದರಿ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ನೀಡಿರುತ್ತೇನೆ. ಸದರಿ ಹೇಳಿಕೆಯನ್ನು ನೋಡುತ್ತಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಯ್ತು. ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯ್ತು. ನಾನು ಮುಮಾ-1 ನ್ನು ನೋಡಿಲ್ಲ. ಆರೋಪಿತರು ನ್ಯಾಯಾಲಯದ ಮುಂದೆ ಇರುತ್ತಾರೆ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

3 ಜನ ಆರೋಪಿತರು ಚಾಸಾ-1 ರವರಿಗೆ ಕೈಯಿಂದ ಹೊಡಿ ಬಡಿ ಮಾಡಿ ಗಾಯಪಡಿಸಿರುತ್ತಾರೆ ಎಂದರೆ ಸರಿ. ನನ್ನನ್ನು ಮತ್ತು ಚಾಸಾ-10 ರವರನ್ನು ಎಳೆದಾಡಿ , ದೂಡಾಡಿ, ಜಗ್ಗಿ ದೂಡಿ ಅವರ ಹೆಣ್ಣು ತನದ ಮಾನಭಂಗ ಮಾಡಿದರು ಎಂದರೆ ಸರಿ.

<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ</u>

ಆರೋಪಿ ಪರ ವಕೀಲರು ಅರ್ಜಿ ಸಲ್ಲಿಸಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಯ್ತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ಎಫ್.ಟಿ.ಎಸ್.ಸಿ-1
ಹಾವೇರಿ.